ಗೆಳೆಯರು – ನನ್ನ ಕೊರಳಾಣೆ! ನಾನು ಯಾವತ್ತೂ ಎಲ್ಲದರಲ್ಲೂ ನಿನ್ನ ಜೊತೆಗಿದ್ದೇನೆ.'

ನಿನಗೆ ನೆನಪಿರಬಹುದು ಗೆಳೆಯಾ, ಅಪ್ಪುಗೆಯನ್ನು ಮೆಲ್ಲನೆ ಸಡಿಲಿಸಿ ನೀನು ಹೇಳಿದೆ:

'ಇದೆಲ್ಲವನ್ನೂ ಇವತ್ತೇ ಶಾರದೆಗೆ ಹೇಳಿಬಿಡುತ್ತೇನೆ; ಹಾಲಿನ ಮನಸ್ಸು ಅವಳದು.' ಆದರೆ, ನಾನೇ ನಿನ್ನ ಉತ್ಸಾಹಕ್ಕೆ ನೀರು ಚೆಲ್ಲಿದೆ. 'ಸದ್ಯ ಬೇಡ ಪುಣ್ಯಾತ್ಮ, ಹೆಣ್ಣಿನ ಮನಸ್ಸು ನನಗೆ ತಿಳಿದಷ್ಟು ನಿನಗ ತಿಳಿದಿಲ್ಲ; ಎಂಥಾ ಅಪ್ಪಟ ಹಾಲೂ ಒಮ್ಮೊಮ್ಮೆ ಬೆಚ್ಚಗೆ ಮಾಡಿದರೂ ಸಾಕು, ಒಡೆದುಹೋಗುತ್ತದೆ.'

ನಿನ್ನನ್ನು ಮತ್ತೆ ಪಡೆದ ಸಂಭ್ರಮದ ಕ್ಷಣದಲ್ಲಿಯೇ ಕಳೆದುಕೊಂಡು ಬಿಡುವ ಭಯವೂ ಇತ್ತು ನನಗೆ. ನನ್ನ ಹೊರತಾಗಿಯೂ ನಿನಗೊಂದು ಹಸನಾದ ಬದುಕಿತ್ತು, ಆದರೆ ನನಗೆ?... ನೀನು ಮಾತ್ರ ಮಾತು ಮರೆಯಲಿಲ್ಲ, ಮುರಿಯಲಿಲ್ಲ! ನೂರು ಜನ್ಮಕ್ಕೂ ಮಿಗುವ ಮಧುರಾತಿ ಮಧುರ ದಿನಗಳನ್ನು ದಯಪಾಲಿಸಿದೆ! ನೀನು ಯಾವತ್ತೂ ಹೇಳಿಕೊಂಡುದಿಲ್ಲ, ಇವತ್ತಿನವರೆಗೂ. ನನಗೆ ಎಷ್ಟೋ ಬಾರಿ ಅನ್ನಿಸಿದೆ: ನನ್ನ ಮಧು, ನಿನಗೆ ಎಲ್ಲವನ್ನೂ ಹೇಳಿ, ನನ್ನ ಜೊತೆಯೇ ಇರುವಂತೆ ಕಳಿಸಿಕೊಟ್ಟಿದ್ದಾನೆ!

ಕೊನರಿದ ಕೊರಡಿಗೆ ಮಳೆ ಹನಿಯ ಋಣ ಇರುವುದಿಲ್ಲವೇ? ಪುರ್ವೀ, ಹಾಗೆಯೆ ನನಗೂ ನಿನ್ನ ಋಣವಿದೆ. ನಾನು ಚಿಗುರಿ ಹಸಿರಾದೆ; ಗಿಣ್ಣುಗಿಣ್ಣುಗಳಲ್ಲಿ ಟಿಸಿಲೊಡೆದು ಹೆಣ್ಣಾದೆ! ಊರಾಚೆಯ ದೊಡ್ಡ ಆಲದ ಮರದ ಕೆಳಗೆ ಕುಳಿತು, ನೀನೊಮ್ಮೆ ಹೇಳಿದೆ: 'ನೀನೀಗ ಮತ್ತೆ ಮದುವಣಗಿತ್ತಿ!'

ಈ ಹೊಗಳಿಕೆಯ ಮಾತನ್ನು ಸುಮ್ಮನೆ ಅಲಂಕಾರಕ್ಕೆ, ಬರೀ ಪ್ರಾಸಕ್ಕೆ ಹೇಳಿರಬೇಕು ಅಂದುಕೊಂಡೆ. (ಮಕ್ಕಳಿಗೆ ಸಾಹಿತ್ಯ ಕಲಿಸುವ ಮೇಷ್ಟ್ರು ನೀನು!) ಮರುದಿನದಿಂದಲೇ ಶುರುವಾಯಿತು ನಿನ್ನ ಕಳಕಳಿಯ ಮನವಿ, ಆತ್ಮೀಯ ಆಗ್ರಹ, ಹಕ್ಕೊತ್ತಾಯದ ಹಾಗಿನ ಹಿತನುಡಿಗಳು, ಭಯ–ಅಭಯದ ಮಾತುಗಳು–

'ಅನು, ಅನುರೂಪನನ್ನು ನೋಡಿ ಮದುವೆಯಾಗು. ನೋಡನೋಡುತ್ತಲೇ, ಹತ್ತಿರದವರು ದೂರವಾಗುತ್ತಾರೆ; ಮಕ್ಕಳು, ತಮ್ಮತಮ್ಮ ಓದು–ನೌಕರಿ–ಮದುವೆ ಎಂದೆಲ್ಲಾ ಹೋಗಿಬಿಡುತ್ತಾರೆ; ಇನ್ನು ನಾವೆಲ್ಲಾ ಎಷ್ಟು ದಿನ ನಿನ್ನೊಂದಿಗೆ? ಹಿಂದೊಮ್ಮೆ ಮದುವೆಯಾಗಿ ಸುಖವಾಗಿದ್ದೆಯಲ್ಲ? ಅದನ್ನೇ ಮತ್ತೆ ಮುಂದುವರಿಸಿದಂತೆ! ವ್ಯತ್ಯಾಸವೆಂದರೆ, ಅಂದು ಹಿರಿಯರು ತೋರಿಸಿದವನನ್ನು ಮದುವೆಯಾಗಿದ್ದೆ – ಇಂದು ಆಯ್ಕೆ ನಿನ್ನದೇ!'

ನಿನ್ನ ಹೆಂಡತಿಯ ಹಿಮ್ಮೇಳದಲ್ಲಿಯೂ ಇದೇ ಹಾಡು! ನಿಮ್ಮಿಂದ ತಪ್ಪಿಸಿಕೊಳ್ಳಲು ನಾನು ಹೇಳಿದ್ದು ನೆನಪಿರಬೇಕಲ್ಲವೇ?

"ಸರಿ. ಹಾಗಾದರೆ, ಅಂಥ ಕಾಲ ಬಂದರೆ, ನಿಮ್ಮ ಮನೆಯಲ್ಲಿಯೇ ಇದ್ದುಬಿಡುತ್ತೇನೆ, ಬಿಡಿ!"

ಆಗಲೂ ಪಟ್ಟು ಬಿಡದೆ ನಿನ್ನ ಹಾಲುಮನಸ್ಸಿನ ಶಾರದೆ ಹೇಳಿದ್ದು –

"ಖಂಡಿತಾ ಆದೀತು, ಇಲ್ಲಿಯೇ ಇದ್ದುಬಿಡಿ, ನನಗೊಬ್ಬ ತಂಗಿ ಸಿಕ್ಕಂತಾಯಿತು!"

ಅಯ್ಯೋ! ದೇವರೇ !!

ಪುರ್ವಿತ್, ಈ ಜುಲೈ ತಿಂಗಳ ಧಾರಾಕಾರ ಮಳೆಯನ್ನು ನೋಡುತ್ತಾ ನಿನ್ನ ನೆನಪಾಯಿತು; ಅದರ ಜೊತೆಜೊತೆಯೇ ಮೇಲಿನದೆಲ್ಲವೂ...

ನೀನು ಇದ್ದಕ್ಕಿದ್ದಂತೆ ಶಾಲೆಯಿಂದ ವರ್ಗ ಮಾಡಿಸಿಕೊಂಡು ಮದರಾಸಿಗೆ ಹೋಗಿಬಿಟ್ಟಿದ್ದೀಯ! ರಜೆ ಮುಗಿಸಿಕೊಂಡು ಬರುವೆ ಎಂದುಕೊಂಡರೆ ಬರಲೇ ಇಲ್ಲ! ನಾನು ಮೊದಲಿನ ಹಾಗೆ ಅಳುಬುರುಕಿ ಅಲ್ಲ ಮಾರಾಯ, ಬೆಳೆದಿದ್ದೇನೆ – ನೀನು ದಯಪಾಲಿಸುತ್ತಿದ್ದ ನಿರಂತರ ಬೈಗುಳದಿಂದ! ಮಗಳು ನಿನ್ನನ್ನು ತುಂಬಾ ನೆನಪಿಸಿಕೊಳ್ಳುತ್ತಾಳೆ – ಕಾಲೇಜಿಗೆ ಸೇರಿದ ಮೊದಲ ದಿನ, ಪುರ್ವಿ ಸರ್ ಇಲ್ಲದೆ ಹೋಗುವುದೇ ಇಲ್ಲ ಎಂದು ಹಟ ಹಿಡಿದುಬಿಟ್ಟಿದ್ದಳು. ನಿನ್ನನ್ನು ಸಂಪರ್ಕಿಸಲು ಮಾಡಿದ ಎಲ್ಲಾ ಪ್ರಯತ್ನಗಳೂ ವಿಫಲವಾದವು. ಎಲ್ಲೋ ಉತ್ತರ ಭಾರತದ ಪ್ರವಾಸದಲ್ಲಿದ್ದೀಯ ಎಂದು ಆಮೇಲೆ